ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಬಾಗೇಪಲ್ಲಿ

**ಸಿ.ಸಿ.ಸಂಖ್ಯೆ ಃ-338/2014**

| | | |
|---|---|---|
| ಸಾಕ್ಷಿದಾರರ ಹೆಸರು | ಃ ರಮೇಶ್‌ಬಾಬು | |
| ತಂದೆಯ/ಗಂಡನ ಹೆಸರು | ಃ ವೆಂಕಟರವಣಪ್ಪ | ಪ್ರಮಾಣೀಕರಿಸಲಾದ<br>ದಿ :20-11-2015 |
| ವಯಸ್ಸು | ಃ 55 | |
| ವೃತ್ತಿ | ಃ ಅಬಕಾರಿ ನಿರೀಕ್ಷಕರು | |
| ವಾಸಸ್ಥಳ | ಃ ಚಿಂತಾಮಣಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ನಾನು ದಿಃ26-11-12 ರಿಂದ ನಾನು ಚಿಂತಾಮಣಿ ವಲಯದಲ್ಲಿ ಅಬಕಾರಿ ನಿರೀಕ್ಷಕರೆಂದು ಕೆಲಸ ಮಾಡುತ್ತಿದ್ದೇನೆ.

ದಿಃ15-03-13 ರಂದು ಚಾ ಸಾ 6 ಮತ್ತು 9 ಹಾಗೂ ಇತರರ ಬಾಗೇಪಲ್ಲಿಯ ಅಬಕಾರಿ ಅಧಿಕಾರಿಗಳೊಂದಿಗೆ ಸಾಮೂಹಿಕ ದಾಳಿ ನಡಸೆಲು ಬಾಗೇಪಲ್ಲಿಗೆ ಬಂದಾಗ, ನಮ್ಮ ಮೇಲಾಧಿಕಾರಿಗಳಿಗೆ ಕೊಲ್ಲಂಪಲ್ಲಿ ಗ್ರಾಮದ ಲಕ್ಷ್ಮಿದೇವಮ್ಮರವರ ಮನೆಯಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಮಾರಾಟ ಮಾಡತ್ತಿದ್ದಾರೆ ಎಂಬ ಮಾಹಿತಿ ಬಂದಿತ್ತು, ಆಗ ದಾಳಿ ಮಾಡಲು ನಮಗೆ ಪಂಚರ ಅವಶ್ಯಕತೆ ಇತ್ತು, ಆಗ ಬಾಗೇಪಲ್ಲಿ ಬಸ್ಸು ನಿಲ್ದಾಣ ಬಳಿ ಇದ್ದ ಚಾ ಸಾ 1 ಮತ್ತು 2 ರವರನ್ನು ನಾವು ಪರಿಚಯ ಮಾಡಿಕೊಂಡು ಅವರಿಗೆ ಮಾಹಿತಿ ವಿಚಾರ ಹೇಳಿ, ಅವರು ದಾಳಿಗೆ ಬರಲು ಒಪ್ಪಿಕೊಂಡ ನಂತರ, ಅವರನ್ನು ನಮ್ಮ ವಾಹದಲ್ಲಿ ಕರೆದುಕೊಂಡು, ನಾವು ಐದಾರು ವಾಹನದಲ್ಲಿ ಒಟ್ಟು 25 ಮಂದಿ ದಾಳಿಗೆ ಕೊಲ್ಲಂಪಲ್ಲಿ ಗ್ರಾಮಕ್ಕೆ ಹೋದೆವು.

ನಾವು ಸದರಿ ಗ್ರಾಮಕ್ಕೆ ಹೋದಾಗ ಬೆ 10-45 ಸಮಯ ಆಗಿತ್ತು, ಆಗ ಗ್ರಾಮಸ್ಥರನ್ನು ವಿಚಾರಿಸಿದಾಗ ಲಕ್ಷ್ಮಿದೇವರ ಸಂಖ್ಯೆ ಮನೆ 10 ಎಂದು ಕೇಳಿದಾಗ ಅವರು ಅವರ ಮನೆಯನ್ನು ತೋರಿಸಿರುತ್ತಾರೆ. ಅದು ಕಲ್ಲು ಮಾಳಿಗೆ ಮನೆಯಾಗಿರುತ್ತದೆ. ನಾವು ಅವರ ಮನೆಯ ಬಳಿ ಹೋಗಿ ಪಂಚರ ಸಮಕ್ಷಮ ಮನೆಯಲ್ಲಿ ಯಾರು ಇದ್ದಾರೆ ಎಂದು ವಿಚಾರಿಸಿದಾಗ ಅಂದಾಜು 50 ರಿಂದ 60 ವರ್ಷ ಮಹಿಳೆ ಹೊರಗೆ ಬಂದಿರುತ್ತಾರೆ. ಅವರ ಹೆಸರನ್ನು ಕೇಳಿದಾಗ ಲಕ್ಷ್ಮಿದೇವಮ್ಮ

ಎಂದು ತಿಳಿಸಿರುತ್ತಾರೆ. ಕಳ್ಳಭಟ್ಟಿ ಸಾರಾಯಿ ಬಗ್ಗೆ ಕೇಳಿದಾಗ ಅವರು ಉತ್ತರಿಸದೇ ತಡಬಾಡಯಿಸಿರುತ್ತಾರೆ.

ಇದ್ದರಿಂದ ಅನುಮಾನ ಗೊಂಡು ಸ್ಥಳದಲ್ಲಿ ಶೋಧನ ಸಮುಚಿತ ವಾರಂಟ್‌ನನ್ನು ತಯಾರು ಮಾಡಿ ಆ ನಂತರ ಮನೆಯನ್ನು ತಪಾಸಣೆ ಮಾಡಿದಾಗ, ಸದರಿ ಮನೆಯಲ್ಲಿ ಒಂದು ವರಂಡ ಮತ್ತು ಅಡುಗೆ ಕೋಟಣೆ ಇದ್ದು, ಅಡುಗೆ ಮನೆಯಲ್ಲಿ 2 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2 ಲೀ ಕಳ್ಳಭಟ್ಟಿ ಇತ್ತು, ಇದರ ಪಕ್ಕದಲ್ಲಿ ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ 180 ಎಂ ಎಲ್ ನ 28 ಹೈವಾಡ್ಸ್ ಟೆಟ್ರಾ ಪ್ಯಾಕಟ್ ವಿಸ್ಕಿ ಇತ್ತು. ಸದರಿ ಮಹಿಳೆ ವಿಸ್ಕಿ ಪ್ಯಾಕೆಟ್ ಹೊಂದಿದ್ದ ಬಗ್ಗೆ ಯಾವುದೇ ಅನುಮತಿ ಪತ್ರ ನೀಡಿರುವುದಿಲ್ಲ. ಅವುಗಳನ್ನು ಹೊಂದಿರುವುದು ಕಾನೂನಿನ ಉಲ್ಲಂಘನೆ ಎಂದು ತಿಳಿಸಿ,

ಆ ನಂತರ ಕಳ್ಳಭಟ್ಟಿ ಸಾರಾಯಿಯಲ್ಲಿ 180 ಎಂ ಎಲ್ ನ 2 ಬಾಟಲಿ ಪ್ರತ್ಯೇಕವಾಗಿ ತೆಗೆದುಕೊಂಡು ಮತ್ತು 28 ಟೆಟ್ರಾ ಪ್ಯಾಕೆಟ್‌ನಲ್ಲಿ 2 ಪ್ಯಾಕೆಟ್‌ನನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಅವುಗಳನ್ನು ಬಿಳಿ ಬಟ್ಟೆಯಿಂದ ಕಟ್ಟಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿರುತ್ತೇವೆ. ಸ್ಥಳದಲ್ಲಿ ಮಾದರಿ ಸೀಲ್ ಪಟ್ಟಿಯನ್ನು ತಯಾರಿಸಿ ಅವುಗಳಿಗೆ ಪಂಚರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿರುತ್ತೇವೆ. ಸ್ಥಳದಲ್ಲಿ ಈ ಬಗ್ಗೆ ಪಂಚನಾಮೆ ಬರೆದಿರುತ್ತೇವೆ. ನಿ ಪಿ 1 ಸದರಿ ಪಂಚನಾಮೆಯಾಗಿರುತ್ತದೆ, ಸಾಕ್ಷಿಯ ಸಹಿಯನ್ನು ನಿ ಪಿ 1 ಸಿ ಎಂದು ಗುರ್ತಿಸಲಾಯಿತು. ಸ್ಥಳದಲ್ಲಿ ಜಪ್ತು ಮಾಡಿಕೊಂಡಂತಹ 2 ಬಾಟಲಿ ಮತ್ತು 2 ಟೆಟ್ರಾ ಪ್ಯಾಕೆಟ್‌ಗಳನ್ನು ನೋಡಿದರೆ ಗುರ್ತಿಸುತ್ತೇನೆ. ಬಾಟಲಿಗಳನ್ನು ಮು ಮಾ 1 ಮತ್ತು 2 ಮತ್ತು ಟೆಟ್ರಾ ಪ್ಯಾಕೆಟ್‌ಗಳನ್ನು ಮು ಮಾ 3 ಮತ್ತು 4 ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ದಿನ ನಾವು ಹಿಡಿದ ವ್ಯಕ್ತಿಯಾಗಿರುತ್ತಾರೆ. ಸದರಿ ದಿನ ತಯಾರಿಸಿದ ಮಾದರಿ ಸೀಲನನ್ನು ನೋಡಿದರೆ ಗುರ್ತಿಸುತ್ತೇನೆ. ಅದನ್ನು ನಿ ಪಿ 2 ಎಂದು ಗುರ್ತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ಶೋಧನ ವಾರಂಟ್‌ನನ್ನು ನೋಡಿದರೆ ಗುರ್ತಿಸುತ್ತೇನೆ. ಅದನ್ನು ನಿ ಪಿ 3 ಎಂದು ಗುರ್ತಿಸಲಾಯಿತು. ಪಂಚನಾಮೆ ಮಾಡಿದಾಗ ಸಮಯ ಬೆ 11 ರಿಂದ 12 ಗಂಟೆಯಾಗಿತ್ತು.

ಆ ನಂತರ ಮು ಮಾ ಹಾಗೂ ಪಂಚನಾಮೆ ಸಮೇತ, ಆರೋಪಿಯನ್ನು ಕರೆದುಕೊಂಡು ಬಾಗೇಪಲ್ಲಿ ವಲಯ ಕಚೇರಿಗೆ ಬಂದಿರುತ್ತೇವೆ. ಆರೋಪಿಯನ್ನು ನಾವು ಗೃಹ ರಕ್ಷಕ ದಳದ ಚಾ ಸಾ 4 ರವರ ಜೊತೆ ಕರೆದುಕೊಂಡು ಬಂದಿರುತ್ತೇವೆ. ಆ ನಂತರ ಆರೋಪಿಯನ್ನು ವಲಯ ಅಧಿಕಾರಿಗಳಿಗೆ ಮುಂದಿನ ತನಿಖೆಗಾಗಿ ವಶಕ್ಕೆ ನೀಡಿರುತ್ತೇವೆ.

**ಪಾಟೀ ಸವಾಲು ಮಾನ್ಯ ಶ್ರೀ. ಬಿ ಎ ಎನ್ ಆರೋಪಿಯ ಪರ ವಕೀಲರಿಂದ ಃ-**

ನಮಗೆ ಮಾಹಿತಿ ಬಂದಾಗ ನಾವು ಬಾಗೇಪಲ್ಲಿ ವಲಯ ಕಛೇರಿಯಲ್ಲಿದ್ದವು. ನಮಗೆ ಮಾಹಿತಿಯ ವಿಚಾರವನ್ನು ಮೇಲಾಧಿಕಾರಿಗಳು ತಿಳಿಸಿರುತ್ತಾರೆ. ನಮಗೆ ಮೇಲಾಧಿಕಾರಿಗಳಿಂದ ಮಾಹಿತಿ ಬಂದಿತ್ತು ಎಂಬ ಅಂಶವನ್ನು ಪಂಚನಾಮೆಯಲ್ಲಿ ಬರೆದ್ದಿದೀರ ಎಂದರೆ ಸಾಕ್ಷಿಯ ಪಂಚನಾಮೆಯನ್ನು ನಾನು ಬರೆದಿಲ್ಲ ಎಂದು ಹೇಳುತ್ತಾರೆ. ನಿ ಪಿ 1 ಪಂಚನಾಮೆ ಬರೆದ ವ್ಯಕ್ತಿ ಹೆಸರು ನೆನಪಿಲ್ಲ.

ಬಾಗೇಪಲ್ಲಿಯನ್ನು ಸದರಿ ದಿನ ನಾವು ಅಂದಾಜು ಬೆಳಗ್ಗೆ 10 ಗಂಟೆಗೆ ಬಿಟ್ಟಿರುತ್ತೇವೆ. ಮೇಲಾಧಿಕಾರಿಗಳಿಗೆ ಮಾಹಿತಿ ಯಾವ್ಯಾಗ ಬಂದಿತ್ತು ಎಂದು ಗೊತ್ತಿಲ್ಲ, ಆದರೆ ಅವರ ಜೊತೆಗೆ ಬೆ 10 ಗಂಟೆಗೆ ಬಿಟ್ಟಿರುತ್ತೇವೆ.

ಬಾಗೇಪಲ್ಲಿಯಿಂದ ಕೊಲ್ಲಂಪಲ್ಲಿ ಗ್ರಾಮಕ್ಕೆ ಅಂದಾಜು 16 ಕಿ ಮೀ ಅಂತರವಿದೆ. ಸದರಿ ದಿನ ನಾವು ನೇರವಾಗಿ ಗ್ರಾಮಕ್ಕೆ ಹೋಗುವ ಪೂರ್ವದಲ್ಲಿ ಪಂಚರ ಅವಶ್ಯಕತೆ ಇದ್ದ ಕಾರಣ ಬಾಗೇಪಲ್ಲಿ ಬಸ್ಸು ನಿಲ್ದಾಣದ ಬಳಿ ನಿಲ್ಲಿಸಿದ್ದೇವು. ಅಲ್ಲಿ ಇಬ್ಬರು ವ್ಯಕ್ತಿಗಳನ್ನು ಹತ್ತಿಸಿಕೊಂಡಿರುತ್ತೇವೆ. ಪಂಚರ ಹೆಸರುಗಳು ಗೊತ್ತು, ಆದರೆ ಅವರ ತಂದೆ ಮತ್ತು ಗ್ರಾಮದ ಹೆಸರು ಗೊತ್ತಿಲ್ಲ. ಚಾ ಸಾ 1 ಮತ್ತು 2 ಮೊದಲೇ ಬಾಗೇಪಲ್ಲಿ ಬಸ್ಸು ನಿಲ್ದಾದಣದಲ್ಲಿ ಇರುತ್ತಾರೆ ಮತ್ತು ಅವರ ಜೊತೆಯಲ್ಲಿಯೇ ಮಾತನಾಡಬೇಕೆಂದು ಗೊತ್ತಿಲ್ಲ. ಬಸ್ಸು ನಿಲ್ದಾಣದ ಬಳಿ ಬೇರೆ ಜನ ಸಹಾ ಇರುತ್ತಾರೆ ಎಂದರೆ ಸರಿ.

ಪಂಚರನ್ನು ಹತ್ತಿಸಿಕೊಂಡು ಆ ಸ್ಥಳ ಬಿಡುವಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಕೊಲ್ಲಂಪಲ್ಲಿ ಗ್ರಾಮದಲ್ಲಿ ಒಟ್ಟು ಎಷ್ಟು ವಾಸದ ಮನೆಗಳಿವೆ ಮತ್ತು ಜನ ಎಷ್ಟು ಇರುತ್ತಾರೆಂದು ನನಗೆ ಗೊತ್ತಿಲ್ಲ. ನಮಗೆ ಗ್ರಾಮಸ್ಥರು ಮನೆ ತೋರಿಸಿರುತ್ತಾರೆ, ಆದರೆ ಅವರ ಹೆಸರು ಗೊತ್ತಿಲ್ಲ. ಸದರಿ ಮನೆಗೆ ಯಾರಿಗೆ ಸೇರಿದ್ದು ಎಂದು ಪರಿಶೀಲನೆ ಮಾಡಿಲ್ಲ, ಆದರೆ ತನಿಖಾಧಿಕಾರಿಗೆ ಗೊತ್ತು. ಸದರಿ ಮನೆಯತ್ತಿರ ಹೋದಾಗ ಊರಿನ ಗ್ರಾಮಸ್ಥರು ಯಾರು ಸೇರಿರಲಿಲ್ಲ. ಸದರಿ ಮನೆಯ ಸುತ್ತಾ ಮುತ್ತಾ ಮನೆಗಳಿವೆ. ಸದರಿ ಮನೆ ಯಾರ ಹೆಸರಿನಲ್ಲಿದೆ ಮತ್ತು ಎಷ್ಟು ಅಳತೆಯಲ್ಲಿದೆ ಎಂಬ ಬಗ್ಗೆ ನಾನು ವಿಚಾರಿಸಿಲ್ಲ.

ಶೋಧನ ಸಮುಚಿತ ವಾರಂಟ್‌ನನ್ನು ತನಿಖಾಧಿಕಾರಿ ನಮ್ಮ ಎದುರಿನಲ್ಲಿ ಮಾಡಿರುತ್ತಾರೆ, ಆದರೆ ಎಷ್ಟು ಗಂಟೆ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಚಾ ಸಾ 9 ತನಿಖಾಧಿಕಾರಿಯಾಗಿರುತ್ತಾರೆ. ಮನೆಯತ್ತಿರ ಹೋದಾಗ ಒಟ್ಟು ಎಷ್ಟು ಜನ ಸೇರಿದ್ದರೆಂದು ಹೇಳಲಾಗುವುದಿಲ್ಲ. ಮನೆಯಲ್ಲಿ ಒಂದು ವರಂಡ್ ಮತ್ತು ಒಂದು ಅಡುಗೆ ಕೋಣೆಯಿತ್ತು.

ಅಡುಗೆ ಮನೆಯ ಯಾವ ದಿಕ್ಕಿನಲ್ಲಿ ಕಳ್ಳಭಟ್ಟಿ ಸಾರಾಯಿ ಮತ್ತು ವಿಸ್ಕಿ ಇಟ್ಟಿದ್ದರೆಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಪ್ಲಾಸ್ಟಿಕ್ ಚೀಲದಲ್ಲಿ ವಿಸ್ಕಿ ಇಟ್ಟಿದ್ದರು ಮತ್ತು 2 ಲೀ ಬಾಟಲಿ ಪ್ರತ್ಯೇಕವಾಗಿ ಇಟ್ಟಿದ್ದರು. ಅವುಗಳನ್ನು ಮನೆಯಾಳೆ ಜಪ್ತು ಮಾಡಿಕೊಂಡಿರುತ್ತೇವೆ. ಮನೆಯೊಳಗೆ ಎಷ್ಟು ಜನ ಹೋಗಿದ್ದೆವು ಎಂದು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಪಂಚರು ಮತ್ತು ಸಿಬ್ಬಂದಿ ಹೋಗಿದ್ದರು ಎಂದು ಹೇಳುತ್ತಾರೆ. ಆದರೆ ಸಿಬ್ಬಂದಿ ಪೈಕಿ ಎಷ್ಟು ಜನ ಒಳಗೆ ಇದ್ದರು ಎಂದು ಹೇಳಲಾಗುವುದಿಲ್ಲ.

ಸದರಿ ಸ್ಥಳದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿದ್ದ 28 ಟೆಟ್ರಾ ಪ್ಯಾಕೆಟ್‌ಗಳನ್ನು ಜಪ್ತು ಮಾಡಿಕೊಂಡಿರುತ್ತೇವೆ. ಚೀಲ ಎಷ್ಟು ಅಳತೆ ಇತ್ತೆಂದು ಅಳತೆ ಮಾಡಿಲ್ಲ. ಅಂದಾಜು ಸಹಾ ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್ ಚೀಲವನ್ನು ಜಪ್ತು ಮಾಡಿಕೊಳ್ಳುವ ಬಗ್ಗೆ ತನಿಖಾಧಿಕಾರಿ ನೋಡಿರುತ್ತಾರೆ. ಪ್ಲಾಸ್ಟಿಕ್ ಚೀಲ ಜಪ್ತು ಮಾಡಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ನಾವು ವಸ್ತುಗಳನ್ನು ಮನೆಯೊಳಗೆ ಜಪ್ತು ಮಾಡಿಕೊಂಡಿರುತ್ತೇವೆ. ಪಂಚನಾಮೆಯನ್ನು ಮನೆಯ ಹೊರಗೆ ಮಾಡಿರುತ್ತೇವೆ.

ವಶಪಡಿಸಿಕೊಂಡಂತಹ 28 ಪ್ಯಾಕೆಟ್‌ಗಳಲ್ಲಿ 2 ಪ್ಯಾಕೆಟ್‌ಗಳನ್ನು ಮಾತ್ರ ನಾವು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ. ಟೆಟ್ರಾ ಪ್ಯಾಕೆಟ್‌ನನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಟೆಟ್ರಾ ಪ್ಯಾಕೆಟ್ಸ್‌ಗಳು ಹೈವರ್ಡ್ಸ್ ವಿಸ್ಕಿ ಎಂಬುದು ನಮೂದು ಮಾಡಿರುತ್ತೇವೆ ಆದರೆ ಯಾವಾಗ ತಯಾರು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಅದು ಯಾವಾಗ ಕಾಲಪರಿಮಿತಿ ಹೊಂದಿರುತ್ತದೆ ಎಂದು ನಾವು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ.

ಕಳ್ಳಭಟ್ಟಿ ಸಾರಾಯಿಯನ್ನು 180 ಎಂ ಎಲ್ ಬಾಟಲಿಯನ್ನು ತೆಗೆದುಕೊಂಡು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ. ಮು ಮಾ 1 ರಿಂದ 4 ರ ಮೇಲಿರುವ ಸೀಲ್‌ನನ್ನು ಚಾ ಸಾ 8 ರವರು ಮಾಡಿರುತ್ತಾರೆ. ನಾವು 180 ಎಂ ಎಲ್ ಕಳ್ಳಭಟ್ಟಿ ಸಾರಾಯಿಯನ್ನು 180 ಎಂ ಎಲ್ ನ 2 ಬಾಟಲಿಯಲ್ಲಿ ಕಳುಹಿಸಿರುತ್ತೇವೆ.

ನಾವು ರಾಸಾಯನಿಕ ಪರೀಕ್ಷೆಗೆ ಕಳುಹಿಸುವಾಗ ಮಾದರಿ ವಸ್ತುಗಳ ಜೊತೆ ಸೀಲ್ ಕಳುಹಿಸುವುದಿಲ್ಲ. ಸಾಕ್ಷಿ ಪುನಃ ಮುಂದುವರೆದು ಮಾದರಿ ಸೀಲ್‌ನನ್ನು ಕಳುಹಿಸುವುದು ತನಿಖಾಧಿಕಾರಿ. ಕಳುಹಿಸಿದೀರ ಇಲ್ಲವೋ ನನಗೆ ಗೊತ್ತಿಲ್ಲ. ನಾವು 28 ಟೆಟ್ರಾ ಪ್ಯಾಕೆಟ್‌ನಲ್ಲಿ 2 ಪ್ಯಾಕೆಟ್‌ನನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡಿರುತ್ತೇವೆ.

ನಾವು ಕೊಲ್ಲಂಪಲ್ಲಿ ಗ್ರಾಮಕ್ಕೆ ಬೇಟಿ ನೀಡಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ಯಾವುದೇ ಸಾಮೂಹಿಕ ದಾಳಿ ಮಾಡಿಲ್ಲ. ನಮ್ಮ ಜೊತೆ ಚಾ ಸಾ 1 ಮತ್ತು 2 ಬಂದಿಲ್ಲ ಮತ್ತು

ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿ ಪಿ 1 ಕ್ಕೆ ನಾನು, ಚಾ ಸಾ 1, 2, ಚಾ ಸಾ 9, 4 ಸಹಿ ಮಾಡಿರುತ್ತೇವೆ. ನಿ ಪಿ 1 ರ ಪಂಚನಾಮೆಯನ್ನು ಬೆ 11 ರಿಂದ 12 ಗಂಟೆ ತನಕ ಬರೆದಿರುತ್ತೇವೆ. ನಾವು ಸ್ಥಳಕ್ಕೆ ಹೋದ ನಂತರ ಮೊದಲು ವಿಚಾರಣೆ ಮಾಡಿ ನಂತರ ಪಂಚನಾಮೆ ಪ್ರಾರಂಭ ಮಾಡಿರುತ್ತೇವೆ. ಬೆಳಗ್ಗೆ 10-45 ಕ್ಕೆ ನಾವು ಆರೋಪಿಯ ಮನೆಯತ್ತಿರ ಹೋಗಿ ಮೊದಲು ವಿಚಾರಿಸಿರುತ್ತೇವೆ.

ಸದರಿ ಮನೆ ಆರೋಪಿಗೆ ಸೇರಿಲ್ಲ ಮತ್ತು ಈ ಕೃತ್ಯಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಕೇಸು ನೊಂದಾಣಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಃ-</u>** ಇಲ್ಲ

(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು)

**ಓ.ಹೇ.ಕೇ.ಸರಿ ಇದೆ**

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ,ಬಾಗೇಪಲ್ಲಿ.**